## ಸುತ್ತೂರು ಶ್ರೀಕ್ಷೇತ್ರ

ಸುತ್ತೂರು ಶ್ರೀಕ್ಷೇತ್ರವು ಮೈಸೂರಿನಿಂದ 25 ಕಿ.ಮೀ. (ವರುಣ–ಹೊಸಕೋಟೆ ಮಾರ್ಗ) ದೂರದಲ್ಲಿದೆ. ಇಲ್ಲಿ ಸಾವಿರ ವರ್ಷಗಳ ಹಿಂದೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಸ್ಥಾಪಿತವಾದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಭವ್ಯ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಶ್ರೀಮಠದ ಬಹುಮುಖ ಸೇವೆಗಳು ಸಮಾಜದ ಒಳಿತಿಗಾಗಿ ವಿಶಿಷ್ಟ ಕೊಡುಗೆಗಳನ್ನು ನೀಡುತ್ತಿವೆ. ಶ್ರೀಮಠದ ವತಿಯಿಂದ ಕೈಗೊಳ್ಳಲಾಗುವ ಎಲ್ಲಾ ಕಾರ್ಯಕ್ರಮಗಳು ಸರ್ವರಿಗೂ ಮುಕ್ತವಾಗಿವೆ.

ಕಪಿಲಾ ನದಿತೀರದ ಹಚ್ಚಹಸಿರಿನ ನಿರ್ಮಲ ವಾತಾವರಣದಲ್ಲಿ ಸುತ್ತೂರು ಶ್ರೀಕ್ಷೇತ್ರ ವಿರಾಜಮಾನವಾಗಿದೆ. ಧರ್ಮಗುರುಗಳನ್ನು, ಗಣ್ಯಾತಿಗಣ್ಯರನ್ನು ಮತ್ತು ಭಕ್ತಾದಿಗಳನ್ನು ತನ್ನತ್ತ ಸೆಳೆಯುತ್ತಿರುವ ಅತಿಶಯತೆಯನ್ನು ಹೊಂದಿದೆ. ಇಲ್ಲಿ ಶಿಕ್ಷಣ ಮಹಾವಿದ್ಯಾಲಯ, ಸಂಸ್ಕೃತ ಕಾಲೇಜು, ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ಶಾಲೆ, ಕೃಷಿವಿಜ್ಞಾನ ಕೇಂದ್ರ, ವೃದ್ಧಾಶ್ರಮಗಳು, ವಸ್ತುಸಂಗ್ರಹಾಲಯ ಹಾಗೂ ವಿದ್ಯಾರ್ಥಿನಿಲಯಗಳು, ಮುಂತಾದ ವಿವಿಧ ರೀತಿಯ ಸಂಸ್ಥೆಗಳಿವೆ. ಶ್ರೀಕ್ಷೇತ್ರಕ್ಕೆ ಆಗಮಿಸುವ ವಿದ್ಯಾರ್ಥಿಗಳ ತಂದೆ–ತಾಯಿ/ಪೋಷಕರಿಗೆ ಶ್ರೀಮಠದಲ್ಲಿ ಪ್ರಸಾದ ಹಾಗೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

## ಜೆಎಸ್‌ಎಸ್ ಮಹಾವಿದ್ಯಾಪೀಠ

'ನ ಹಿ ಜ್ಞಾನೇನ ಸದೃಶಂ' ಎಂಬುದನ್ನು ಮನಗಂಡಿದ್ದ ಪ್ರಾತಃಸ್ಮರಣೀಯರಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸಿದರು. ಅದಕ್ಕೂ ಮೊದಲು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ಅರ್ಹ ವಿದ್ಯಾರ್ಥಿಗಳಿಗೆ ಅಶನ–ವಸತಿ ಸೌಕರ್ಯಗಳನ್ನು ಒದಗಿಸಿದ್ದರು. ಕಳೆದ ಏಳೆಂಟು ದಶಕಗಳಿಂದ ನಾಡಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಂಸ್ಥೆಯು ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಜಾತಿ–ಮತ–ಪಂಥಗಳ ಭೇದವಿಲ್ಲದೆ ಸರ್ವರಿಗೂ ಸಮಾನ ಅವಕಾಶ ನೀಡುವ ವಿಶಾಲ ತಳಹದಿಯ ಮೇಲೆ ಸಾಕ್ಷರತೆಯ ಬೆಳಕನ್ನು ಎಲ್ಲೆಡೆ ಬೀರುತ್ತಿದೆ. ಮಹಾವಿದ್ಯಾಪೀಠದ ಆಶ್ರಯದಲ್ಲಿ ಶಿಶುವಿಹಾರದಿಂದ ತಾಂತ್ರಿಕ, ವೈದ್ಯಕೀಯ, ಸ್ನಾತಕೋತ್ತರ ಶಿಕ್ಷಣದ ಜೊತೆಗೆ ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯಕ್ಕೆ ಸಂಬಂಧಿಸಿದಂತೆ 300ಕ್ಕೂ ಹೆಚ್ಚು ಸಂಸ್ಥೆಗಳಿವೆ. ಕರ್ನಾಟಕ, ತಮಿಳುನಾಡು, ಉತ್ತರಪ್ರದೇಶ ಹಾಗೂ ದೆಹಲಿಗಳಲ್ಲಿಯೂ ಸಂಸ್ಥೆಯು ಸೇವಾನಿರತವಾಗಿದೆ. ಅಮೆರಿಕ, ದುಬೈ ಹಾಗೂ ಮಾರಿಷಸ್ ದೇಶಗಳಲ್ಲಿ ಕೂಡ ಶೈಕ್ಷಣಿಕ, ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಪ್ರತಿ ವರ್ಷ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಜ್ಞಾನಾರ್ಜನೆಗೆ ಅವಕಾಶ ಪಡೆದುಕೊಳ್ಳುತ್ತಿದ್ದಾರೆ.

## ಜೆಎಸ್‌ಎಸ್ ವಸತಿ ಶಾಲೆ

ಆರ್ಥಿಕ ಸಂಕಷ್ಟಕ್ಕೆ, ಕೌಟುಂಬಿಕ ಸಮಸ್ಯೆಗಳಿಂದಾಗಿ ಪ್ರಾಥಮಿಕ–ಪ್ರೌಢ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗಾಗಿ ಶಿಕ್ಷಣ ಹಾಗೂ ಅಶನ–ವಸತಿಗಳ ಸೌಲಭ್ಯವನ್ನು ಶ್ರೀಕ್ಷೇತ್ರದಲ್ಲಿ ಸುಮಾರು 65 ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ಕಲ್ಪಿಸಲಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳ ವ್ಯವಸ್ಥೆ ಇದೆ. ಇದಲ್ಲದೆ ಸಂಸ್ಕೃತ, ಸಂಗೀತ, ನೃತ್ಯ, ಚಿತ್ರಕಲೆ, ಪರಿಸರಪ್ರಜ್ಞೆ, ಜೀವನಮೌಲ್ಯಗಳು, ವ್ಯಕ್ತಿತ್ವ ವಿಕಾಸ, ಯೋಗ, ಮಲ್ಲಕಂಬ ಇತ್ಯಾದಿ ದೇಸಿ ಆಟಗಳು, ಕ್ರೀಡೆ, ಎನ್.ಸಿ.ಸಿ. ಸ್ಕೌಟ್ಸ್ ಮತ್ತು ಗೈಡ್ಸ್, ಬ್ಯಾಂಡ್, ಕೃಷಿ, ಕಂಪ್ಯೂಟರ್ ಶಿಕ್ಷಣ, ಕರಕುಶಲ ಕಲೆ ಹಾಗೂ ವೃತ್ತಿಪರ ತರಬೇತಿ ಮೊದಲಾದ ಹಲವಾರು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಇಲ್ಲಿನ ಶಿಕ್ಷಣಕ್ರಮದಲ್ಲಿ ಒತ್ತು ನೀಡಲಾಗುತ್ತಿದೆ. ಪ್ರತಿ ವರ್ಷವೂ 10ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ.

## ಶೈಕ್ಷಣಿಕ ಸೌಲಭ್ಯಗಳು

- ❖ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಲ್ಲಿ ಕಲಿಯಲು ಅವಕಾಶಗಳಿವೆ.
- ❖ ಸುಸಜ್ಜಿತ ಗ್ರಂಥಾಲಯ, ಕಂಪ್ಯೂಟರ್ ಕೇಂದ್ರ ಹಾಗೂ ಇಂಟರ್‌ನೆಟ್ ವ್ಯವಸ್ಥೆ ಇದೆ.
- ❖ ವಿಶಾಲವಾದ ಕ್ರೀಡಾಂಗಣ ಮತ್ತು ಮಲ್ಟಿಜಿಮ್‌ಗಳು ಇವೆ.
- ❖ ಆರೋಗ್ಯ ತಪಾಸಣೆಗಾಗಿ ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ದಂತ ಚಿಕಿತ್ಸಾಲಯ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಗಳಿವೆ. ಜೆಎಸ್‌ಎಸ್ ಆಸ್ಪತ್ರೆಗಳ ತಜ್ಞ ವೈದ್ಯರು ಮತ್ತು ಶುಶ್ರೂಷಕರ ನಿರಂತರ ಸೇವೆ ಲಭ್ಯವಿದೆ. ಸಾಧಾರಣ ಅನಾರೋಗ್ಯಕ್ಕೆ ಅಗತ್ಯವಾದ ಔಷಧೋಪಚಾರವನ್ನು ತಕ್ಷಣವೇ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಪೋಷಕರು ಭರಿಸಬೇಕಾಗುತ್ತದೆ.
- ❖ ಶಾಲಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಯಲು ಸಭಾಂಗಣವಿದೆ.
- ❖ ಬೌದ್ಧಿಕ ವಿಕಾಸಕ್ಕಾಗಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದ ಗಣ್ಯರೊಡನೆ ಆಗಿಂದಾಗ್ಗೆ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.

## ವಿದ್ಯಾರ್ಥಿನಿಲಯಗಳು

- ❖ 40 ವಿದ್ಯಾರ್ಥಿಗಳು ಇರಬಹುದಾದ ವಿಶಾಲ ಡಾರ್ಮಿಟರಿಗಳಿವೆ.
- ❖ ಬೆಳಗಿನ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಇದೆ. ಅಗತ್ಯವಾದ ಪೌಷ್ಟಿಕ ಆಹಾರವನ್ನು ನೀಡಲಾಗುವುದು.
- ❖ ಹಬ್ಬ ಹಾಗೂ ವಿಶೇಷ ದಿನಗಳಲ್ಲಿ ವಿಶೇಷ ಪ್ರಸಾದದ ವ್ಯವಸ್ಥೆ ಇರುತ್ತದೆ.
- ❖ ಶುದ್ಧೀಕರಿಸಿದ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲಾಗಿದೆ.
- ❖ ಪುಸ್ತಕ, ಬಟ್ಟೆ ಇನ್ನಿತರ ವಸ್ತುಗಳನ್ನು ಇಟ್ಟುಕೊಳ್ಳಲು ಪ್ರತ್ಯೇಕ ಕಪಾಟುಗಳ ವ್ಯವಸ್ಥೆ ಕಲ್ಪಿಸಲಾಗಿದೆ.
- ❖ ಶುಚಿತ್ವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತದೆ. ಶೌಚಾಲಯ ಹಾಗೂ ಸುಸಜ್ಜಿತ ಸ್ನಾನಗೃಹಗಳಿವೆ. ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ ಇದೆ.
- ❖ ಪ್ರತಿ ಡಾರ್ಮಿಟರಿಯಲ್ಲಿಯೂ ಪ್ರತ್ಯೇಕ ಕ್ಷೇಮಪಾಲಕರು ಇರುತ್ತಾರೆ.
- ❖ ಬೆಳಗ್ಗೆ ಹಾಗೂ ಸಂಜೆ ವೇಳೆ ಸಾಮೂಹಿಕ ಪ್ರಾರ್ಥನೆ ಮತ್ತು ವಿದ್ಯಾರ್ಥಿಗಳಿಂದ ಚಿಂತನ ಕಾರ್ಯಕ್ರಮಗಳಿರುತ್ತವೆ.

## 2019–20ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದ ವಿವರಗಳು/ಸೂಚನೆಗಳು

- ❖ ಅರ್ಜಿ ಸಲ್ಲಿಸಲು 10.5.2019 ಕೊನೆಯ ದಿನ. ಅನಂತರ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ.
- ❖ ಅರ್ಜಿಯಲ್ಲಿ ಪ್ರವೇಶ ಬಯಸುವ ತರಗತಿ ಮತ್ತು ಮಾಧ್ಯಮವನ್ನು ಸೂಚಿತ ಸ್ಥಳದಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
- ❖ ಅರ್ಜಿ ಭರ್ತಿ ಮಾಡುವಾಗ ವಿಳಾಸವನ್ನು ಸಂಪೂರ್ಣವಾಗಿ ಒದಗಿಸಬೇಕು (ಮನೆ ಸಂಖ್ಯೆ, ಬೀದಿ, ಮೊಹಲ್ಲ, ಪಟ್ಟಣ/ಗ್ರಾಮ, ತಾಲ್ಲೂಕು, ಜಿಲ್ಲೆ ಇತ್ಯಾದಿ). ಸ್ಥಿರ ದೂರವಾಣಿ/ಮೊಬೈಲ್, ಇಮೈಲ್ ಇತ್ಯಾದಿ ವಿವರಗಳೆಲ್ಲವನ್ನು ಒದಗಿಸಬೇಕು.
- ❖ ಅರ್ಜಿ ಸಲ್ಲಿಸುವಾಗ ಕೆಳಗೆ ನಮೂದಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು **ಕಡ್ಡಾಯವಾಗಿ** ಲಗತ್ತಿಸಬೇಕು. ಸಂದರ್ಶನಕ್ಕೆ ಬರುವಾಗ ಮೂಲ ದಾಖಲೆಗಳನ್ನು ತರಬೇಕು.

1. ಜನ್ಮ ದಿನಾಂಕ ದೃಢೀಕರಣ ಪತ್ರ (1ನೆಯ ತರಗತಿಗೆ ಮಾತ್ರ)
2. ಹಿಂದಿನ ತರಗತಿಯ ಅಂಕಪಟ್ಟಿ
3. ಜಾತಿ ದೃಢೀಕರಣ ಪತ್ರ
4. ವಾರ್ಷಿಕ ವರಮಾನ ಪತ್ರ
5. ವೈದ್ಯಕೀಯ ಪ್ರಮಾಣ ಪತ್ರ
6. ವಿದ್ಯಾರ್ಥಿ, ತಂದೆ/ ತಾಯಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ.
7. ವಿದ್ಯಾರ್ಥಿಗೆ ಸಂಬಂಧಿಸಿದ ರಾಷ್ಟ್ರೀಕೃತ ಬ್ಯಾಂಕ್ ಖಾತೆ ಪುಸ್ತಕದ ಮೊದಲ ಪುಟದ ಜೆರಾಕ್ಸ್ ಪ್ರತಿ
8. ಪಡಿತರ ಚೀಟಿ (ರೇಷನ್ ಕಾರ್ಡ್)
9. ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರು ಆರ್ಥಿಕವಾಗಿ ಹಿಂದುಳಿದಿರುವ ಬಗ್ಗೆ ಸ್ಥಳೀಯ ಮಠಾಧಿಪತಿಗಳು, ಧರ್ಮಗುರುಗಳು, ಜನಪ್ರತಿನಿಧಿಗಳು ಅಥವಾ ಗಣ್ಯರಿಂದ ಪಡೆದ ದೃಢೀಕರಣ ಪತ್ರ

ಪ್ರವೇಶ ಪ್ರಕ್ರಿಯೆ ವಿವರಗಳು ಕೆಳಕಂಡಂತಿವೆ.

| ತರಗತಿ | ಲಿಖಿತ ಪರೀಕ್ಷೆ | ಸಂದರ್ಶನ | ಫಲಿತಾಂಶ ಪ್ರಕಟ | ದಾಖಲಾತಿ |
|---|---|---|---|---|
| 4 ರಿಂದ 8ನೆಯ ತರಗತಿ | **17.5.2019 ಬೆಳಗ್ಗೆ 10.00** | **18.5.2019 ಬೆಳಗ್ಗೆ 10.00** | **21.5.2019** | **29.5.2019 ರಿಂದ 6.6.2019** |
| 1 ರಿಂದ 3ನೆಯ ತರಗತಿ | **ದಿನಾಂಕ 29.5.2019 ರಿಂದ 6.6.2019ರವರೆಗೆ ಮೌಖಿಕ ಸಂದರ್ಶನ ಮಾಡಲಾಗುವುದು** | | | |

ಕನ್ನಡ ಮಾಧ್ಯಮಕ್ಕೆ 1 ರಿಂದ 7ನೇ ತರಗತಿಯವರೆಗೆ, ಇಂಗ್ಲಿಷ್ ಮಾಧ್ಯಮಕ್ಕೆ 1 ಮತ್ತು 5ನೇ ತರಗತಿಗೆ ಹಾಗೂ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮಕ್ಕೆ 8ನೇ ತರಗತಿಯವರೆಗೆ ಮಾತ್ರ ಪ್ರವೇಶಾವಕಾಶವಿದೆ.

ಇಂಗ್ಲಿಷ್ ಮಾಧ್ಯಮದ 2, 3, 4, 6 ಮತ್ತು 7ನೇ ತರಗತಿಗಳಿಗೆ ಹಾಗೂ 9 ಮತ್ತು 10ನೇ ತರಗತಿಯ ಯಾವುದೇ ಮಾಧ್ಯಮದ ತರಗತಿಗಳಿಗೆ ಪ್ರವೇಶಾವಕಾಶ ಇರುವುದಿಲ್ಲ. ಪ್ರವೇಶ ಪರೀಕ್ಷೆ ಫಲಿತಾಂಶವನ್ನು ಅಂಚೆ ಮೂಲಕ ತಿಳಿಸಲಾಗುವುದು.

**ನಿಯಮಗಳು**

- ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ವ್ಯವಸ್ಥೆ ನೀಡಲಾಗುವುದು.
- ಶಾಲಾ ಶುಲ್ಕ, ಪಠ್ಯ ಪುಸ್ತಕ, ನೋಟ್ ಪುಸ್ತಕಗಳು, ಸಮವಸ್ತ್ರ ಮತ್ತು ಇತರ ಅಗತ್ಯ ಸಾಮಗ್ರಿಗಳಿಗೆ ತಗಲುವ ವೆಚ್ಚವನ್ನು ಪೋಷಕರು ಭರಿಸಬೇಕು.
- ವಸತಿನಿಲಯದಲ್ಲಿ ದಾಖಲಾಗುವ ಮಕ್ಕಳನ್ನು ಪೋಷಕರು ತಿಂಗಳಿಗೊಮ್ಮೆ ಮಾತ್ರ ಭೇಟಿ ಮಾಡಲು ಅವಕಾಶವಿರುತ್ತದೆ. ಶನಿವಾರ ಮಧ್ಯಾಹ್ನ 12.00 ರಿಂದ ಸಂಜೆ 5.00 ರವರೆಗೆ ಮತ್ತು ಭಾನುವಾರ ಬೆಳಗ್ಗೆ 10.00 ರಿಂದ ಸಂಜೆ 4.30 ರವರೆಗೆ ಭೇಟಿ ಮಾಡಬಹುದು.
- ಮಕ್ಕಳನ್ನು ದೀರ್ಘಾವಧಿ ರಜೆಯಲ್ಲಿ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ, ಪೂರ್ವಾನುಮತಿ ಪಡೆದು ಊರಿಗೆ ಕರೆದುಕೊಂಡು ಹೋಗಬಹುದು.
- ವಿದ್ಯಾರ್ಥಿಗಳನ್ನು ತಂದೆ, ತಾಯಿ ಹಾಗೂ ಪೋಷಕರ ಜೊತೆಗೆ ಮಾತ್ರ ಕಳುಹಿಸಿಕೊಡಲಾಗುವುದು.
- ಮಕ್ಕಳನ್ನು ಭೇಟಿ ಮಾಡಿದ ನಂತರ ಪೋಷಕರು ಶಾಲಾ ಆವರಣದಲ್ಲಿ ಉಳಿದುಕೊಳ್ಳಲು ಅವಕಾಶವಿರುವುದಿಲ್ಲ. ಶ್ರೀಮಠದಲ್ಲಿ ವಾಸ್ತವ್ಯ ಮಾಡಬಹುದು. ಅಲ್ಲಿ ಪ್ರಸಾದಕ್ಕೆ ವ್ಯವಸ್ಥೆ ಇರುತ್ತದೆ.
- ತಂದೆ/ತಾಯಿ/ಪೋಷಕರು ವಿದ್ಯಾರ್ಥಿಗಳಿಗೆ ಅವಶ್ಯಕತೆಗಿಂತ ಹೆಚ್ಚಿನ ಹಣವನ್ನು ನೀಡಬಾರದು.
- ಮಕ್ಕಳಿಗೆ ಅನಾರೋಗ್ಯವಾದಲ್ಲಿ ಅಥವಾ ಮತ್ತೇನಾದರೂ ಸಮಸ್ಯೆಗಳು ಉಂಟಾದಲ್ಲಿ ಪತ್ರದ/ದೂರವಾಣಿ ಮೂಲಕ ಮನೆಯವರಿಗೆ ಕೂಡಲೇ ತಿಳಿಸಲಾಗುವುದು.

ಸಂಸ್ಥೆಯ ಶಿಸ್ತಿನ ದೃಷ್ಟಿಯಿಂದ ನಿಯಮಗಳನ್ನು ಎಲ್ಲರೂ ಪಾಲಿಸಬೇಕಾದುದು ಅವಶ್ಯಕ. ಯಾವುದೇ ಕಾರಣಕ್ಕೂ ನಿಯಮಗಳನ್ನು ಸಡಿಲಗೊಳಿಸಲಾಗುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಮೇಲ್ಕಂಡ ನಿಯಮಾವಳಿಗಳನ್ನು ಅನುಸರಿಸುವ ಬಗ್ಗೆ ತಂದೆ, ತಾಯಿ/ಪೋಷಕರು ಸೂಕ್ತ ಮುಚ್ಚಳಿಕೆಯನ್ನು ನೀಡಬೇಕು.

**ಸೂಚನೆ:** ಸುತ್ತೂರು ಶ್ರೀಕ್ಷೇತ್ರದ ಶಾಲೆಯಲ್ಲಿ ಪ್ರವೇಶಾವಕಾಶ ಸಿಗದಿದ್ದ ಸಂದರ್ಭದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವು ಸ್ಥಾಪಿಸಿರುವ ಈ ಕೆಳಗಿನ ವಿದ್ಯಾರ್ಥಿನಿಲಯ/ಅನಾಥಾಲಯಗಳಲ್ಲಿ ಗಂಡುಮಕ್ಕಳ ಪ್ರವೇಶಕ್ಕೆ ಅನುಕೂಲ ಕಲ್ಪಿಸಲಾಗುವುದು.

1. ಜೆಎಸ್ಎಸ್ ನಿರ್ಗತಿಕ ಮಕ್ಕಳ ಕುಟೀರ, ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು. ಶ್ರೀ ಎಂ. ಜಲೇಂದ್ರ – 9916914853
2. ಜೆಎಸ್ಎಸ್ ಅನಾಥಾಲಯ, ತೆರಕಣಾಂಬಿ, ಗುಂಡ್ಲುಪೇಟೆ ತಾಲ್ಲೂಕು ಶ್ರೀ ಡಿ.ಎನ್. ಸ್ವಾಮಿ. ಮುಖ್ಯೋಪಾಧ್ಯಾಯರು– 9901809889
3. ಜೆಎಸ್ಎಸ್ ಅನಾಥಾಲಯ, ಚಾಮರಾಜನಗರ ಶ್ರೀ ಎಚ್.ಎಸ್. ಉಮೇಶ್ – 9880501947
4. ಶ್ರೀ ಬಸವೇಶ್ವರ ಅನಾಥಾಲಯ, ಬಾಚಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು ಶ್ರೀ ರವಿಕುಮಾರ್ – 9538580345
5. ಶ್ರೀ ಬಸವೇಶ್ವರ ಅನಾಥಾಲಯ, ಶಿವಪುರ, ಗುಂಡ್ಲುಪೇಟೆ ತಾಲ್ಲೂಕು ಶ್ರೀ ಶಾಂತಮಲ್ಲೇಶ್ – 9742636465
6. ಶ್ರೀ ಬಸವೇಶ್ವರ ಅನಾಥಾಲಯ, ವಡ್ಡಗೆರೆ, ಗುಂಡ್ಲುಪೇಟೆ ತಾಲ್ಲೂಕು ಶ್ರೀ ಮಹಂತದೇವರು – 6360256679
7. ಜೆಎಸ್ಎಸ್ ಅನಾಥಾಲಯ, ಕೆ.ಆರ್. ನಗರ ಶ್ರೀ ಕೆ.ಬಿ. ಬಸವರಾಜಪ್ಪ – 7349671340
8. ಜೆಎಸ್ಎಸ್ ವಿದ್ಯಾರ್ಥಿನಿಲಯ, ರಾಮಾಪುರ, ಕೊಳ್ಳೇಗಾಲ ತಾಲ್ಲೂಕು ಶ್ರೀ ಕೆ. ರಾಜಶೇಖರ್ – 08225–274518, 9449994081
9. ಜೆಎಸ್ಎಸ್ ವಿದ್ಯಾರ್ಥಿನಿಲಯ,ದೊಡ್ಡಕಾಡನೂರು,ಹೊಳೆನರಸೀಪುರ ತಾ॥ ಶ್ರೀ ವಿ.ಎಸ್. ಮಾಲಿ ಪಾಟೀಲ್ – 9449680075


**ಸಂಪರ್ಕ ವಿಳಾಸ**

**ಜೆಎಸ್ಎಸ್ ಸಂಸ್ಥೆಗಳು, ಸುತ್ತೂರು**

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ 571129

ಹಿರಿಯ ಪ್ರಾಥಮಿಕ ಶಾಲೆ – 08221–232054
ಪ್ರೌಢಶಾಲೆ – 08221–232653
ಬಸವೇಶ್ವರ ವಿದ್ಯಾರ್ಥಿನಿಲಯ – 08221–232332
ಅಕ್ಕಮಹಾದೇವಿ ವಿದ್ಯಾರ್ಥಿನಿಲಯ – 08221–232036


**ಪ್ರವೇಶ ಅರ್ಜಿಯು ಕೆಳಕಂಡ ವೆಬ್‌ಸೈಟ್‌ಗಳಲ್ಲಿಯೂ ದೊರೆಯುತ್ತದೆ**

www.jssonline.org, www.jsskvk.in

**ಮೈಸೂರಿನಿಂದ ಸುತ್ತೂರು ಶ್ರೀಕ್ಷೇತ್ರಕ್ಕೆ ಸರ್ಕಾರಿ ಹಾಗೂ ಖಾಸಗಿ ಬಸ್ ಸೌಲಭ್ಯವಿರುತ್ತದೆ. ಸಿಟಿ ಬಸ್ ನಂ. 205, 346. RMC ಬಸ್‌ನಿಲ್ದಾಣ ಹಾಗೂ ಹಾರ್ಡಿಂಜ್ ವೃತ್ತದಿಂದ ಖಾಸಗಿ ಬಸ್‌ಗಳಿರುತ್ತವೆ.**

## ಜೆಎಸ್ಎಸ್ ಶಾಲೆ

### ಸುತ್ತೂರು ಶ್ರೀಕ್ಷೇತ್ರ


ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ 571129

ಇ.ಮೇಲ್ : sutturujss@gmail.com


# ಪ್ರವೇಶ ಮಾಹಿತಿ

# 2019–20




**ಜೆಎಸ್ಎಸ್ ಮಹಾವಿದ್ಯಾಪೀಠ**

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570004

Website: www.jssonline.org